ಭಲೋ ಸುದ್ದಿ ಬರತಿದ್ದವು... ಪಾರ್ಲಿಮೆಂಟದಾಗ ನಮ್ಮ ಫ್ಯಾಕ್ಟರಿ ಬಗ್ಗೆ ಲೋಕಸಭಾ ಸದಸ್ಯರು ಮಾತಾಡಿದ್ದಾರಂತ... ಫ್ಯಾಕ್ಟರಿ ಚಾಲೂ ಮಾಡೋದರ ಬಗ್ಗೆ ಯಾವುದ್ಯಾವೊದೋ ಡಿಪಾರ್ಟ್‌ಮೆಂಟ್ ಜೊತಿಗೆ ಮಾತುಕತೆ ನಡದದಂತ... ಇನ್ನೊಂದು ತಿಂಗಳಿಗೆ ಫ್ಯಾಕ್ಟರಿ ಚಾಲು ಆಗಬಹುದಂತ ಎನ್ನುವ ಅಂತೆಕಂತೆ ಸುದ್ದಿಗಳು ರೆಕ್ಕೆಪುಕ್ಕ ಹಚ್ಚಿಕೊಂಡು ಬಂದು ಕೇಳಲು ಬಹಳ ಹಿತ ಎನಿಸುತ್ತಿದ್ದವು. ಆದರೆ ವರ್ಷವಾದರೂ ಫ್ಯಾಕ್ಟರಿ ಚಾಲೂ ಆಗದಿದ್ದಾಗ ಈ ಸುದ್ದಿಗಳಲ್ಲಿ ಸತ್ವವಿಲ್ಲ ಎನಿಸುತ್ತಿತ್ತು. ಮಾರುತಿಯ ಮುಖ ದಿನದಿನಕ್ಕೂ ಬಾಡಹತ್ತಿತ್ತು. ಫ್ಯಾಕ್ಟರಿ ಚಾಲೂ ಆಗದ ಎಷ್ಟೋ ಗಂಭೀರ ವಿಷಯಗಳನ್ನು ಆತ ಪಾರ್ವತಿಗೆ ಹೇಳದೆ ತನ್ನೊಳಗೆ ಇಟಗೊಂಡು ಒದ್ದಾಡಿದ್ದ, ಊಟ–ನಿದ್ದಿ ಸರಿಯಾಗಿಲ್ಲದ ದೇಹ ಒಣಗಾಕ ಹತ್ತಿತ್ತು. ಮುಖದ ಮ್ಯಾಲ ಕುರುಚಲ ಗಡ್ಡ ಸುರುವಾಗಿ ಮುಖ ಕಳೆಗುಂದಿತು.



ಮಾರುತಿ ಜೊತೆಗೆ ಕೆಲಸ ಮಾಡುತ್ತಿದ್ದ ಕೆಲ ಸಹೋದ್ಯೋಗಿಗಳು ಬ್ಯಾರೆ ನೌಕರಿ ಹುಡುಕಿಕೊಂಡು ಬೆಂಗಳೂರು, ಹೈದರಾಬಾದು, ಪುಣೆ... ಮತ್ತಿತರ ಕಡೆ ಹೋಗಿಬಿಟ್ಟಿದ್ದರು. ಮಾರುತಿ ತನ್ನ ಭವಿಷ್ಯನಿಧಿಯ ಒಂದಷ್ಟು ಹಣ ವಾಪಸ್ ಪಡೆದು ನಾಕಾರು ತಿಂಗಳು ಬದುಕು ದಾಟಿಸಿದ್ದ. ಸಹಾಯಕ್ಕಾಗಿ ಮಾವನನ್ನು ಹೋಗಿ ಕೇಳಲು ಅವನಿಗೆ ಸಂಕೋಚ... ಪಾರ್ವತಿ ಒಂದೆರಡು ಸಾರಿ ಒತ್ತಾಯ ಮಾಡಿದ್ದರೂ ಸುಮ್ಮನಿದ್ದ. ಆದರೆ ಫ್ಯಾಕ್ಟರಿ ಬಂದಾದ ಸುದ್ದಿ ಗೊತ್ತಾದ ಮಾವ ಮಗಳಲ್ಲಿಗೆ ಬಂದಾಗ ಅವಳ ಕೈಯಲ್ಲಿ ಒಂದಿಷ್ಟು ರೊಕ್ಕ ಇಟ್ಟು ಹೋಗುತ್ತಿದ್ದ. ಇದು ಎಷ್ಟು ದಿನಾಂತ ನಡದೀತು?

ಕೂತು ಕೂತು ಬ್ಯಾಸರ ಬರಕತ್ತದ... ಇದು ಎಷ್ಟು ದಿನನೋ ಗೊತ್ತಿಲ್ಲ... ಏನರ ಮಾಡಿ ಎಲ್ಲಾರ ಒಂದು ಕೆಲಸ ಹುಡುಕ್ಕಳ್ಳದು ಚಲೋ ಎಂದರಿತ ಮಾರುತಿ ಒಂದು ದಿನ ಪಾರ್ವತಿಗೆ ಇದ್ದ ಸಂಗತಿ ಹೇಳಿಬಿಟ್ಟ. ತಕ್ಷಣ ಪ್ರತಿಕ್ರಿಯಿಸಿದ್ದ ಪಾರ್ವತಿ, 'ಈ ವಯಸ್ಸಿನ್ಯಾಗ ಯಾವ ಊರಂತ ತಿರಗತೀರಿ... ಏನಂತ ಕೆಲಸ ಹುಡುಕತೀರಿ... ಹಳ್ಳಿಗೆ ಹೋಗಿ ಅಪ್ಪನ ಜೊತೆ ಇದ್ದ ಬಿಡಣ... ಅವನೂ ಒಬ್ಬನ ಇದ್ದಾನ... ಜೊತೆಗೆ ದುಡಿದು ಬದುಕಿದರಾತು...' ಎಂದು ಕೆಲ ತಿಂಗಳ ಹಿಂದಷ್ಟೆ ತೀರಿಹೋಗಿದ್ದ ಪಾರ್ವತಿಯ ತಾಯಿ ಮತ್ತು ದೂರದ ಬಳ್ಳಾರಿ ಕಡೆಯ ಹೆಂಡತಿಯ ಊರಿಗೆ ಹೋಗಿ ನೆಲೆಸಿದ್ದ ಅಣ್ಣನ ನೆನೆದು 'ಹೆಂಗೋ ಮನೀನೂ ಖಾಲಿ ಅದ...' ಎಂದು ಅಲವತ್ತುಕೊಂಡಿದ್ದಳು. 'ಬ್ಯಾಡ ಪಾರ್ವತಿ... ನಿಮ್ಮಪ್ಪಗ ಯ್ಯಾಕ ನಾವು ಹೊರೆ ಆಗಬೇಕು... ನಿಮ್ಮಣ್ಣ ಇವತ್ತಿಲ್ಲ ನಾಳೆ ವಾಪಸ್ ತನ್ನ ಮನೆಗೆ ಬರಬಹುದು... ಯಾರಿಗೆ ಗೊತ್ತು? ಇನ್ನೊಂದು ತಿಂಗಳು ನೋಡೋಣ. ಫ್ಯಾಕ್ಟರಿ ಚಾಲು ಆದರ ಸರಿ... ಇಲ್ಲಾಂದರ ಬೇರೆ ಏನರ ವ್ಯವಸ್ಥೆ ಮಾಡಣ ಬಿಡು...' ಎಂದು ಹುರುಪು ತುಂಬಿದ್ದ.

ಮತ್ತೊಂದು ಕಡೆಗೆ, ಒಂದೆರಡು ತಿಂಗಳಲ್ಲಿ ಫ್ಯಾಕ್ಟರಿ ಚಾಲು ಆಗಬಹುದು... ಆದರ ಸರ್ವೀಸಿನಲ್ಲಿರುವ ಎಲ್ಲರಿಗೂ ಪೂರಾ ಮುಚ್ಚಿದ್ದ ಅವಧಿಯ ಸಂಬಳವನ್ನು ಕೊಡಲಾಗುವುದು ಎಂಬ ಆಸೆ ಹುಟ್ಟಿಸುವ ಸುದ್ದಿಗೆ ಮಾರುತಿ ಮತ್ತು ಅವನ ಇತರ ಕೆಲ ಜೊತೆಗಾರ ಕಾರ್ಮಿಕರು ಜೋತು ಬಿದ್ದಿದ್ದನ್ನು ತಿಳಿಸಿದ. ಆಗದಿದ್ದರ ಇಲ್ಲೇ ಸುತ್ತಮುತ್ತ ಖಣಿಯೊಳಗೋ ಇಲ್ಲ ಪಾಲಿಶಿಂಗ್ ಫ್ಯಾಕ್ಟರಿಯೊಳಗೋ ಒಂದು ಕೆಲಸ ಸಿಗತಾವ. ನೀನೇನ ಚಿಂತೆ ಮಾಡಬೇಡ ಎಂದು ಪಾರ್ವತಿಯನ್ನು ಸಮಾಧಾನಪಡಿಸಿದ್ದ.

'ಇನ್ನೊಂದು ಸ್ವಲ್ಪ ದಿನ ತಡಿಯೋ, ಫ್ಯಾಕ್ಟರಿ ಚಾಲು ಆಕೈತಿ... ಎಲ್ಲಿ ಖಣಿ ಪಣಿ ಅಂತ ನೌಕರಿ ಹುಡುಕ್ಕೊಂಡು ಹೋಗತಿ...' ಎಂದು ಗೆಳೆಯ ಶಾಂತಲಿಂಗ ಅಂದಮ್ಯಾಲನೂ ಅದಕ್ಕೆ ಕಿವಿಗೊಡದ ಮಾರುತಿ ಪಾಲಿಶಿಂಗ್ ಫ್ಯಾಕ್ಟರಿ ಒಂದು ನೌಕರಿ ಹುಡುಕುವ ಯೋಚನೆಯನ್ನು ಕೈಬಿಟ್ಟದ್ದಿಲ್ಲ. ಕೆಲಸವಿಲ್ಲ, ಹಣವಿಲ್ಲವೆಂದರೆ ಬದುಕುವುದು ಹೇಗೆ? ಮಾವನನ್ನು ಎಷ್ಟು ಸಲಾಂತ ಕೇಳುವುದು... ಈ ಕಾರ್ಮಿಕ ಮುಖಂಡರನ್ನು ಹೇಗೆ ನಂಬುವುದು? ಎಂದು ತನ್ನ ಹಾದಿ ತಾನು ಕಂಡುಕೊಳ್ಳಬೇಕೆಂದು ನಿರ್ಧರಿಸಿ, ಹೊಸ ಕೆಲಸ ಹುಡುಕುವುದರಲ್ಲಿ ಈಗ ಅವನು ತುಂಬಾ ಬಿಜಿಯಾಗಿಬಿಟ್ಟಿದ್ದ. ಮಕ್ಕಳು, ಮನೆಯ ಕೆಲಸವನ್ನೆಲ್ಲ ಪಾರ್ವತಿಯೇ ನಿಭಾಯಿಸುತ್ತಿದ್ದಳು.

**4**

ಕೆಲವು ದಿನಗಳ ಕಾಲದ ಹುಡುಕಾಟದ ನಂತರ ಕಾಗಿನಾ ನದಿ ಆಚೆಯ ಊರು ಶಂಕರವಾಡಗಿ ಹತ್ತಿರದ ಒಂದು ಪಾಲಿಶಿಂಗ್ ಫ್ಯಾಕ್ಟರಿಯಲ್ಲಿ ನೌಕರಿ ಸಿಕ್ಕಿತು ಮಾರುತಿಗೆ. ದಿನಕ್ಕೆ ಎರಡನೂರೈವತ್ತು ರೂಪಾಯಿ ಕೂಲಿ. ಕೆಲಸ ಬೆಳಿಗ್ಗೆ ಒಂಬತ್ತರಿಂದ ಸಂಜೆ ಆರೇಳ ಆಗತಿತ್ತು. ಒಂದೊಂದು ಸಾರಿ ಎಂಟೋಂಬತ್ತು ಆಗುತ್ತಿತ್ತು. ಮನಿಗೆ ಬರದಕ್ಕ... ರಜೆ, ಭತ್ತೆ, ಬೋನಸ್... ಯಾವುದೂ ಇರಲಿಲ್ಲ. ಇದನ್ನು ಮೊದಲೆ ಕಟ್ಟಪ್ಪಣೆ ಮಾಡಿದ್ದ ಪಾಲಿಶಿಂಗ್ ಫ್ಯಾಕ್ಟರಿಯ ಮಾಲೀಕ. ನೋಡ ನೋಡುತ್ತಲೆ ಹೊಸ ನೌಕರಿ ಸುರುವಾಗಿ ಒಂದು ತಿಂಗಳು ಕಳೆದಿತ್ತು.

ಹೊಸ ಕೆಲಸದಿಂದ ಮಾರುತಿಗೆ ಆರಂಭದಲ್ಲಿ ಒಂದು ರೀತಿಯ ಖುಷಿಯಿತ್ತು. ಈಗ ಹಂಗೂ ಹಿಂಗೂ ಮಾಡಿ ಒಂದು ತಿಂಗಳ ಕಳೆದ ಸಂತಸದಲ್ಲಿ ಮೊದಲ ಸಂಬಳ ಅವತ್ತು ಬಂದಿತ್ತು. ಸಂಜಿಗೆ ಏಳಕ್ಕ ಮನಿಗೆ ಹೋಗ ಮುಂದ ಮಾರುತಿ ಮಕ್ಕಳಿಗೆ ಖಾರಾ, ಫೇಡಾ ತಗೊಂಡು ಹೋಗಿದ್ದ. ಕೆಲಸದಿಂದ ದಣಿಯುತ್ತಿದ್ದರೂ, ನೌಕರಿ ಸಿಕ್ಕ ಉತ್ಸಾಹದಲ್ಲಿ ಅವೆಲ್ಲವನ್ನೂ ಮಾರುತಿ ಮರೆಯುತ್ತಿದ್ದ. ತಡವಾಗಿ ಬಂದ ಗಂಡನ ಮುಖದಲ್ಲಿ ಅಂದು ಇದ್ದಕ್ಕಿದ್ದಂತೆ ಕಂಡ ಖುಷಿ ನೋಡಿ ಪಾರ್ವತಿಗೆ ಧೈರ್ಯ ಬಂದಿತ್ತು. ಗಂಡನಿಗೆ ಕೈಕಾಲು ಮುಖ ತೊಳೆದು ಬರಲು ಹೇಳಿ ಊಟಕ್ಕೆ ತಯಾರಿ ಮಾಡಿದಳು. ಮಕ್ಕಳು ಖಾರಾ–ಫೇಡಾ ಸಿಕ್ಕ ಖುಷಿಯಲ್ಲಿ ತಿನ್ನುತ್ತಾ ಆಡಲು ಹೊರಗೋಡಿದವು.

ಊಟವಾದ ನಂತರ, ಮಾರುತಿ ಪಾರ್ವತಿಯನ್ನು ತನ್ನ ಹತ್ತಿರ ಕೂರಿಸಿಕೊಂಡು ಹೊಸ ಕೆಲಸದ ವಿವರಗಳನ್ನು ವಿವರವಾಗಿ ಹೇಳಲು ಶುರುವಿಟ್ಟುಕೊಂಡ. ಪಾರ್ವತಿಗೂ ಅಂದು ಮನೆಯ ಬಾಕಿ ಉಳಿದ ಕೆಲಸ ಮಾಡಿಕೊಳ್ಳಲು ಮನಸಾಗದೆ ಗಂಡನ ಪಕ್ಕ ಸುದ್ದಿ ಕೇಳುತ್ತ ಕುಳಿತಳು. ಒಂದು ಹದಿನೈದು ಇಪ್ಪತ್ತು ನಿಮಿಷ ಸುದ್ದಿ ವಿವರವಾಗಿ ಹೇಳಿ, 'ನನಗ ನಿದ್ದಿ ಬರಾಕ ಹತ್ಯದ ಪಾರು...' ಎಂದು ಅದಾಗಲೆ ಹಾಸಿಗೆ ಸೇರಿದ್ದ ಮಕ್ಕಳ ಪಕ್ಕದಲ್ಲಿ ನಿದ್ದೆಹೋದ. ಪಾರ್ವತಿಗೆ ಅಷ್ಟು ಬೇಗ ನಿದ್ದೆ ಬರಲಿಲ್ಲ. ಗಂಡನಿಗೆ ಕೆಲಸ ಸಿಕ್ಕ ವಿಷಯ ಖುಷಿ ನೀಡಿದರೂ ಒಂದೇ ತಿಂಗಳಲ್ಲಿ ಆತ ಪಟ್ಟಿರಬಹುದಾದ ಕಷ್ಟಗಳು ಕಣ್ಣಮುಂದೆ ಬಂದು ಹೋದಂತೆ ಆದವು. ಆತ ಅನುಭವಿಸಿದ ಎಲ್ಲ ನೋವುಗಳು ಮಲಗಿದ್ದ ಗಂಡನ ಮುಖದಲ್ಲಿ ಪ್ರತಿಬಿಂಬಿಸಿದಂತೆ ಕಂಡವು. ನಟ್ಟಿರುಳು ಹತ್ತಿರವಾಗುತ್ತಿತ್ತು. ಅಂತಹ ರಾತ್ರಿಯಲ್ಲೂ ಅವಳಿಗೆ ತಾನು ಮಾರುತಿಯನ್ನು ಮದುವೆಯಾಗಿ ಬಂದ ಕ್ಷಣಗಳು ನೆನಪಾಗಿ, ಹಿಂದಿನಿಂದಲೆ ಮದುವೆ ಮಾಡಿಕೊಂಡು ಹೋದ ನಾದಿನಿಯರು, ಸಹಾಯ ಪಡೆದ ಮೈದುನರು... ಹೀಗೆ ಯಾರ್‍ಯಾರೋ ನೆನಪಾದರು. ಯಾಕೆ ಹೀಗೆ ನೆನಪಾದರೋ ಅವಳಿಗೆ ಅಚ್ಚರಿ ಎನಿಸಿತು. ಬಹುಶಃ ಫ್ಯಾಕ್ಟರಿ ಸ್ಥಗಿತಗೊಂಡ ಸುದ್ದಿ ತಿಳಿದೂ ಯಾರೊಬ್ಬರೂ ತಮ್ಮ ಸಹಾಯಕ್ಕೆ ಬರದೆ ಇರುವುದರಿಂದಲೆ ಅವಳಿಗೆ ಹೀಗನಿಸಿರಬೇಕು. ತಕ್ಷಣವೆ ಅವಳ ಅಂತರಾಳದ ಪ್ರಜ್ಞೆ ಜಾಗೃತಗೊಂಡಿತು. 'ಯಾರ್‍ಯಾಕೆ ಸಹಾಯಕ್ಕೆ ಬರಬೇಕು... ನಮ್ಮ ನಸೀಬು ಕೆಟ್ಟಿದ್ದಾಗ ಏನೂ ಮಾಡಲಕ್ಕ ಆಗದಿಲ್ಲ...' ಎಂದು ತನ್ನನ್ನು ತಾನು ಹಣೆದುಕೊಂಡು ಗಂಡನ ಪಕ್ಕದಲ್ಲಿ ಮೈಚಾಚಿದಳು. ಗಂಡ ಎಷ್ಟೊತ್ತಿನವರೆಗೆ ಗೊರಕೆ ಹೊಡೆಯುತ್ತಿದ್ದ... ಈ ಗೊರಕೆ ಒಳ್ಳೆಯದ್ದರ ಸೂಚಕವೊ? ಎಂಬ ಪ್ರಶ್ನೆ ಕಾಡಲಾರಂಭಿಸಿ, ಅವಳ ಕಣ್ಣುಗಳೂ ಎಳೆಯಲು ಸುರುಮಾಡಿದ್ದವು.

***

ತನ್ನ ಹಳೆಯಫ್ಯಾಕ್ಟರಿ ಶುರುವಾಗೋ ಯಾವುದೇ ಲಕ್ಷಣಗಳು ಕಾಣದಿರುವಾಗ, ಹೊಸ ಕೆಲಸದಾಗೇನೋ ಅಲ್ಪಸ್ವಲ್ಪ ಸಮಾಧಾನ ಸಿಕ್ಕಿತ್ತು. ಆದರೆ ಕೆಲಸ ಮಾತ್ರ ವಿಪರೀತವಾಗಿತ್ತು. ಸತತ ದುಡಿಮೆಯಿಂದ ಆರೋಗ್ಯ ಏರುಪೇರಾಗಹತ್ತಿತ್ತು. ಅದಾಗಲೆ ಕೆಲಸ ಶುರುಮಾಡಿ ವರ್ಷೊಪ್ಪತ್ತು ಕಳೆದಿತ್ತು, ತಾನು ಗಳಿಸಿದ ರೊಕ್ಕದೊಳಗ ನಾಕು ರೊಕ್ಕ ಉಳಸಬದಲು, ಉಲ್ಟಾ ಡಾಕ್ಟ್ರು, ಔಷಧಿ, ದವಾಖಾನಿ ಅಂತ ಈಗೀಗ ಸುರುವಾಗಿತ್ತು. ಮತ್ತೆ ಇದರ ಮ್ಯಾಲೆ ಒಂದ ದಿನ ಪಾಲಿಶಿಂಗ್ ಕೆಲಸ ಬಿಟ್ರೂನೂ ಪಗಾರ್ ಕಟ್ ಆಗತಿತ್ತು. ಮಾರುತಿಗೆ ನಾನು ನೌಕರಿಗೆ ಸೇರಿ ಭಾಳ ಭಲೋ ಕೆಲಸ ಮಾಡಿದೆ ಅಂತ ಒಂದು ಸಾರಿ ಅನಿಸಿದ್ರ, ಇನ್ನೂಂದು ಸಾರಿ ಈ ದುಡಿಮೆಯಿಂದ ಆರೋಗ್ಯ ಹಾಳಾಗಕತ್ಯದ ಅನ್ನೋ ಚಿಂತಿ ಸುರುವಾಗಿತ್ತು. ಪಾರ್ವತಿಗೆ ಇತ್ತಲಾಗ ಗಂಡ ಪಾಲಿಶಿಂಗ್ ಕೆಲಸ ಬಿಟ್ಟು ಬಂದ್ರ ಅಪ್ಪನ ಹತ್ರ ಹೋಗಿ ಹೊಲದಾಗ ದುಡುದು ತಿನ್ನದು ಚೆಂದ ಕಂಡಿತ್ತು. ಗಂಡ ಹೆಂಡಿರಿಬ್ಬರೂ ಒಂದೊಂದು ರೀತಿಯಲ್ಲಿ ತೊಳಲಾಟಕ್ಕೆ ಸಿಕ್ಕು ಒದ್ದಾಡಕತಿದ್ರು... ಒಂದ ಸಲ ಪಾರ್ವತಿಯ ಅಪ್ಪ ಮನಿಗೆ ಬಂದು 'ಹಳ್ಳಿಗೆ